ಬೆಂಗಳೂರು ನಗರದಲ್ಲಿ ಮದ್ಯದಂಗಡಿಗಳ ನಿಯಂತ್ರಣ.

2289(2733)

ಶ್ರೀ ಸುಬ್ಬಾರೆಡ್ಡಿ ಕೆ.ಎನ್(ಬಸವನಗುಡಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿ ದೇವಾಲಯ, ಪ್ರಾರ್ಥನಾ ಮಂದಿರ, ಶಾಲೆ, ಕಾಲೇಜುಗಳ ಸಮೀಪದಲ್ಲಿ ಮದ್ಯದಂಗಡಿಗಳು ತಲೆ ಎತ್ತುವುದನ್ನು ನಿಯಿಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

1) ಕರ್ನಾಟಕ ಅಬಕಾರಿ ಲೈಸೆನ್ಸ್‌ಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿ 1967ರ ನಿಯಮ 5ರ ಪ್ರಕಾರ ದೇವಾಲಯ, ಪ್ರಾರ್ಥನಾ ಮಂದಿರ, ಶಾಲೆ ಕಾಲೇಜುಗಳು ಆಸ್ಪತ್ರೆ ಮುಂತಾದವುಗಳಿಂದ 100 ಮೀಟರ್ ಒಳಗಿನ ಅಂತರದಲ್ಲಿ ಮದ್ಯದಂಗಡಿಗೆ ಸನ್ನದು ನೀಡಲು ಆಸ್ಪದವಿರುವುದಿಲ್ಲ. ನಗರ ಮಿತಿಯಲ್ಲಿ ಮದ್ಯದಂಗಡಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಅಬಕಾರಿ ಆಯುಕ್ತರು ತಮ್ಮ ವಿವೇಚನಾಧಿಕಾರವನ್ನು ಉಪಯೋಗಿಸಿಕೊಂಡು 50 ರಿಂದ 100 ಮೀಟರ್ ಒಳಗೆ ಇರುವ ಪ್ರದೇಶದಲ್ಲಿ ಸಹ ಮದ್ಯದಂಗಡಿ ಮಂಜೂರು ಮಾಡಲು ಪೂರ್ವಾನುಮತಿ ನೀಡಬಹುದಾಗಿರುತ್ತದೆ. ಆದರೆ ಸನ್ನದು ಮಂಜೂರಾತಿಗಾಗಿ ಯಾವುದೇ ಅರ್ಜಿಯು ಬಂದಾಗ ಮೇಲೆ ಹೇಳಿದ ಅಂಶಗಳಲ್ಲದೇ ಸನ್ನದು ಮಂಜೂರು ಮಾಡುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆಯೆಂಬ ಅಂಶವನ್ನು ಸಹ ಪರಿಗಣಿಸಿ ವಿವೇಚನಾ ಪೂರ್ವಕ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ.

ರಾಜ್ಯದ ದೇವಾಲಯಗಳಲ್ಲಿ ಆಡಳಿತ ಮಂಡಳಿ ನಡೆಸಿರುವ ಅಕ್ರಮಗಳು.

2290(2735)

ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ದೇವಾಲಯಗಳಲ್ಲಿನ ಆಡಳಿತ ಮಂಡಳಿ ನಡೆಸಿರುವ ಅಕ್ರಮ ಬೆಳಕಿಗೆ ಬಂದಿದೆ?

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;